# ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301

**DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301**

ದೂರವಾಣಿ : 08382 221170
Telephone: 08382 221170 (Fax)
Email: itstaffdudckarwar@gmail.com


ನಂ. ಡಿಯುಡಿಸಿ /ವಿವ/ಕರಾವಳಿ ಉತ್ಸವ/2017-18 ದಿನಾಂಕ: 02-11-2017

## ಅಲ್ಪಾವಧಿ ಟೆಂಡರ್ ಪ್ರಕಟಣೆ
## ಇ-ಪ್ರೊಕ್ಯೂರ್‌ಮೆಂಟ್ ಮೂಲಕ

**ಯಾವತ್ತೂ ಶುದ್ಧ ಕುಡಿಯುವ ನೀರು ಸರಬರಾಜು ವ್ಯವಸ್ಥೆ , ಕೂಲಿ ಮತ್ತು ಶೌಚಾಲಯಗಳನ್ನು ಪೂರೈಸುವ ಸಂಸ್ಥೆ / ವ್ಯಕ್ತಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,**

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ರವೀಂದ್ರನಾಥ ಕಡಲ ತೀರದಲ್ಲಿ ಇರುವ ಮಯೂರವರ್ಮ ವೇದಿಕೆಯಲ್ಲಿ ಮತ್ತು ಜಿಲ್ಲಾ ರಂಗಮಂದಿರದಲ್ಲಿ ಕರಾವಳಿ ಉತ್ಸವ-2017 ದಿನಾಂಕ: 08, 09, 10 ಡಿಸೆಂಬರ್ 2017 ರಂದು ನಡೆಸಲು ನಿರ್ಧರಿಸಲಾಗಿದೆ. ಆದ್ದರಿಂದ ಸದರ ಪ್ರದೇಶದಲ್ಲಿ ಬರುವ ಸಾರ್ವಜನಿಕರಿಗೆ/ ಅಧಿಕಾರಿಗಳಿಗೆ ಶುದ್ಧ ಯುವಿ (Ultra Violet) ಕುಡಿಯುವ ನೀರಿನ ತಾತ್ಕಾಲಿಕ ಘಟಕವನ್ನು ಸೂಚಿಸಿದ ಸ್ಥಳಗಳಲ್ಲಿ ಪೂರೈಸಲು ಹಾಗೂ ಸದರ ಪ್ರದೇಶದಲ್ಲಿ 1) ಮಹಿಳಾ ಮತ್ತು ಪುರುಷ ಮೊಬೈಲ್ ಅಥವಾ ಪ್ರಿ ಫೆಬ್ರಿಕೇಟೆಡ್ ಶೌಚಾಲಯಗಳನ್ನು ಅಳವಡಿಸಿ, ನೀರು ಸರಬರಾಜು ವ್ಯವಸ್ಥೆ ಮಾಡುವುದು ಮತ್ತು ಈ ಕಾರ್ಯಕ್ರಮ ಮುಕ್ತಾಯವಾದ ನಂತರ ಸ್ಥಳವನ್ನು ಖುಲ್ಲಾಪಡಿಸಿಕೊಡುವುದು. 2) ಕರಾವಳಿ ಉತ್ಸವ-2017 ನಡೆಯುವ ಮೈದಾನದಲ್ಲಿ ಉತ್ಸವ ಪೂರ್ವದಲ್ಲಿ ಮತ್ತು ಉತ್ಸವದ ನಂತರ ಮೈದಾನಗಳಲ್ಲಿಯ ಘನತ್ಯಾಜ್ಯಗಳನ್ನು ಸಂಗ್ರಹಿಸಿ ನಗರಸಭೆಯ ತ್ಯಾಜ್ಯ ವಿಲೇವಾರಿ ಕೇಂದ್ರಕ್ಕೆ ಸಾಗಿಸುವ ಕಾಮಗಾರಿ. 3) ಕರಾವಳಿ ಉತ್ಸವ ನಡೆಯುವ ಸಂದರ್ಭದಲ್ಲಿ ಸಮವಸ್ತ್ರ ಧರಿಸಿದ ಕೂಲಿಗಳನ್ನು ಪೂರೈಸುವ ಬಗ್ಗೆ ಈ ಕೆಳಗಿನ ಶರ್ತಿಗೆ ಒಳಪಟ್ಟು ಟೆಂಡರನ್ನು ಕರೆಯಲಾಗಿದೆ. ಟೆಂಡರ ಸಲ್ಲಿಸುವ ಅಂತಿಮ ದಿನಾಂಕ:14-11-2017 ರಂದು 16-00 ಗಂಟೆ ಒಳಗಡೆ ದರವಾರವನ್ನು ಇ-ಪ್ರೊಕ್ಯೂರಮೆಂಟ್ ಮೂಲಕ ಸಲ್ಲಿಸಬಹುದಾಗಿದೆ.

1. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 14-11-2017 ರಂದು 16-00 ಗಂಟೆ
2. ಟೆಂಡರ್ ತೆರೆಯುವ ದಿನಾಂಕ: 15-11-2017 ರಂದು 17-00 ಗಂಟೆ
3. ಮುಂಗಡ ಠೇವಣಿ ರೂ. 10,000/- (ಇ-ಪೇಮೆಂಟ್ ಮೂಲಕ)
4. ಕಾಮಗಾರಿ ಮುಕ್ತಾಯಗೊಳಿಸಲು ನಿಗಧಿಪಡಿಸಿದ ಅವಧಿ 10 ದಿನಗಳು

**ಶರ್ತುಗಳು :**

1) ಇ-ಪ್ರೊಕ್ಯೂರ್‌ಮೆಂಟ ಮೂಲಕ ಸ್ವೀಕೃತವಾದ ದರವಾರುಗಳನ್ನು ಹಾಜರಿದ್ದ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಎದುರಿನಲ್ಲಿ ದಿನಾಂಕ: 15-11-2017 ರಂದು 17-00 ಗಂಟೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರದಲ್ಲಿ ತೆರೆಯಲಾಗುವುದು.

2) ಟೆಂಡರ್ ಮಂಜೂರಾದವರು ಮಂಜೂರಿ ಆದೇಶ ನೀಡಿದ 10 ದಿನಗಳಲ್ಲಿ ಕಾಮಗಾರಿಯನ್ನು ಪೂರ್ಣ ಮಾಡಿ ಕೊಡತಕ್ಕದ್ದು.

3) ಟೆಂಡರ್ ಮಂಜೂರಾದವರು ತಿಳಿಸಿದ ತಕ್ಷಣ ರೂ. 200.00 ರ ಛಾಪಾ ಕಾಗದದ ಮೇಲೆ ಕರಾರು ಪತ್ರ ಬರೆದುಕೊಡುವುದು ಹಾಗೂ ರೂ. 25,000/- ಡಿ. ಡಿ. ಅಥವಾ ಬ್ಯಾಂಕ ಗ್ಯಾರಂಟಿ ಪತ್ರವನ್ನು ನೀಡತಕ್ಕದ್ದು.

4) ಟೆಂಡರ್ ಮಂಜೂರಾದವರು ಕಾಮಗಾರಿ ಸ್ಥಳದಲ್ಲಿ ಸಾಮಗ್ರಿಗಳ ಸುರಕ್ಷತೆ ಮತ್ತು ಭದ್ರತೆಯನ್ನು ತಮ್ಮ ಸ್ವಂತ ಖರ್ಚಿನಿಂದ ಮಾಡಿಕೊಳ್ಳತಕ್ಕದ್ದು.

5) ಟೆಂಡರ್ ಮಂಜೂರಾದವರು ಈ ಕಾಮಗಾರಿಗೆ ಸಂಬಂಧಪಟ್ಟವರು ತಿಳಿಸಿದ ಸೂಚನೆಗಳನ್ನು ನಿರ್ವಹಿಸಲು ಬದ್ಧರಿರತಕ್ಕದ್ದು.

6) ಟೆಂಡರ್ ಮಂಜೂರಾದವರು ಸಂಬಂಧಪಟ್ಟವರು ತಿಳಿಸಿದ ಸಲಹೆ ಸೂಚನೆಗಳನ್ನು ಪಾಲಿಸದೇ ಇದ್ದಲ್ಲಿ ಮತ್ತು ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದಲ್ಲಿ ಗುತ್ತಿಗೆಯನ್ನು ರದ್ದು ಪಡಿಸಲಾಗುವುದು. ಮತ್ತು ಈ ಸಂಬಂಧ ಗುತ್ತಿಗೆದಾರರಿಗೆ ಆಗುವ ಲುಕ್ಸಾನಿಗೆ ಈ ಕಚೇರಿಯು ಜವಾಬ್ದಾರರಾಗುವುದಿಲ್ಲ.

7) ಟೆಂಡರ ಸಲ್ಲಿಸುವವರು ಎಲ್ಲಾ ತೆರಿಗೆ ಹಾಗೂ ಸಾಗಾಣೆ ವೆಚ್ಚಗಳನ್ನು ಸೇರಿಸಿ ದರವಾರವನ್ನು ನೀಡತಕ್ಕದ್ದು.

8) ಈ ಟೆಂಡರ್ ಸಂಬಂಧ ಜಿಲ್ಲಾಧಿಕಾರಿಗಳು ಕೈಗೊಳ್ಳುವ ನಿರ್ಣಯ ಅಂತಿಮವಾಗಿರುತ್ತದೆ. ಅದನ್ನು ಪ್ರಶ್ನಿಸುವ ಅಧಿಕಾರಿ ಯಾರಿಗೂ ಇರುವುದಿಲ್ಲ.

9) ಟೆಂಡರ್‌ದಾರರು ಸಲ್ಲಿಸುವ ದರವಾರವು ಎಲ್ಲಾ ತೆರಿಗೆ ಮತ್ತು ಕರ ಸೇರಿಸಿ ನೀಡತಕ್ಕದ್ದು.

3/11/17

ಅಧ್ಯಕ್ಷರು
ಟೆಂಡರ್ ಸಮಿತಿ ಕರಾವಳಿ ಉತ್ಸವ – 2017 ಮತ್ತು
ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ,
ಉತ್ತರ ಕನ್ನಡ, ಕಾರವಾರ

ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301
DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301
ದೂರವಾಣಿ : 08382 221170
Telephone: 08382 221170 (Fax)
Email: itstaffdudckarwar@gmail.com

ನಂ. ಡಿಯುಡಿಸಿ/ವಿವ /ಕರಾವಳಿ ಉತ್ಸವ/2017-18

ದಿನಾಂಕ:02-11-2017

## ಅಲ್ಪಾವಧಿ ಟೆಂಡರ್ ಪ್ರಕಟಣೆ

### ಇ-ಪ್ರೊಕ್ಯುರ್‌ಮೆಂಟ್ ಮೂಲಕ

**ಯಾವತ್ತೂ ಶುದ್ಧ ಕುಡಿಯುವ ನೀರು ಸರಬರಾಜು ವ್ಯವಸ್ಥೆ , ಕೂಲಿ ಮತ್ತು ಶೌಚಾಲಯಗಳನ್ನು ಪೂರೈಸುವ ಸಂಸ್ಥೆ / ವ್ಯಕ್ತಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,**

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ರವೀಂದ್ರನಾಥ ಕಡಲ ತೀರದಲ್ಲಿ ಇರುವ ಮಯೂರವರ್ಮ ವೇದಿಕೆಯಲ್ಲಿ ಮತ್ತು ಜಿಲ್ಲಾ ರಂಗಮಂದಿರದಲ್ಲಿ ಕರಾವಳಿ ಉತ್ಸವ-2017 ದಿನಾಂಕ: 08, 09, 10 ಡಿಸೆಂಬರ್ 2017 ರಂದು ನಡೆಸಲು ನಿರ್ಧರಿಸಲಾಗಿದೆ. ಆದ್ದರಿಂದ ಸದರ ಪ್ರದೇಶದಲ್ಲಿ ಬರುವ ಸಾರ್ವಜನಿಕರಿಗೆ/ ಅಧಿಕಾರಿಗಳಿಗೆ ಶುದ್ಧ ಯುವಿ (Ultra Violet) ಕುಡಿಯುವ ನೀರಿನ ತಾತ್ಕಾಲಿಕ ಘಟಕವನ್ನು ಸೂಚಿಸಿದ ಸ್ಥಳಗಳಲ್ಲಿ ಪೂರೈಸಲು ಹಾಗೂ ಸದರ ಪ್ರದೇಶದಲ್ಲಿ 1) ಮಹಿಳಾ ಮತ್ತು ಪುರುಷ ಮೊಬೈಲ್ ಅಥವಾ ಪ್ರಿ ಫೆಬ್ರಿಕೇಟೆಡ್ ಶೌಚಾಲಯಗಳನ್ನು ಅಳವಡಿಸಿ, ನೀರು ಸರಬರಾಜು ವ್ಯವಸ್ಥೆ ಮಾಡುವುದು ಮತ್ತು ಈ ಕಾರ್ಯಕ್ರಮ ಮುಕ್ತಾಯವಾದ ನಂತರ ಸ್ಥಳವನ್ನು ಖುಲ್ಲಾಪಡಿಸಿಕೊಡುವುದು. 2) ಕರಾವಳಿ ಉತ್ಸವ-2017 ನಡೆಯುವ ಮೈದಾನದಲ್ಲಿ ಉತ್ಸವ ಪೂರ್ವದಲ್ಲಿ ಮತ್ತು ಉತ್ಸವದ ನಂತರ ಮೈದಾನಗಳಲ್ಲಿಯ ಘನತ್ಯಾಜ್ಯಗಳನ್ನು ಸಂಗ್ರಹಿಸಿ ನಗರಸಭೆಯ ತ್ಯಾಜ್ಯ ವಿಲೇವಾರಿ ಕೇಂದ್ರಕ್ಕೆ ಸಾಗಿಸುವ ಕಾಮಗಾರಿ. 3) ಕರಾವಳಿ ಉತ್ಸವ ನಡೆಯುವ ಸಂದರ್ಭದಲ್ಲಿ ಸಮವಸ್ತ್ರ ಧರಿಸಿದ ಕೂಲಿಗಳನ್ನು ಪೂರೈಸುವ ಬಗ್ಗೆ ಶರ್ತಿಗೆ ಒಳಪಟ್ಟು ಟೆಂಡರನ್ನು ಕರೆಯಲಾಗಿದೆ. ಟೆಂಡರ ಸಲ್ಲಿಸುವ ಅಂತಿಮ ದಿನಾಂಕ:14-11-2017 ರಂದು 16-00 ಗಂಟೆ ಒಳಗಡೆ ದರವಾರವನ್ನು ಇ-ಪ್ರೊಕ್ಯೂರಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶ, ಕಾರವಾರ ಇವರ ದೂರವಾಣಿ ಸಂಖ್ಯೆ 08382-221170 ಅಥವಾ ಇ-ಮೇಲ್ itstaffdudckarwar@gmail.com ಮೂಲಕ ಸಂಪರ್ಕಿಸಬಹುದು.

3/11/17

ಅಧ್ಯಕ್ಷರು
ಟೆಂಡರ್ ಸಮಿತಿ ಕರಾವಳಿ ಉತ್ಸವ – 2017 ಮತ್ತು
ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ,
ಉತ್ತರ ಕನ್ನಡ, ಕಾರವಾರ